ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.1326/2020 CW-10 PW-8

| | | |
|---|---|---|
| ಹೆಸರು | : | ವೈಜನಾಥ ರೆಡ್ಡಿ |
| ತಂದೆಯ/ಗಂಡನ ಹೆಸರು | : | ಶಾಂತರೆಡ್ಡಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಪಿ.ಎಸ್.ಐ. ಕಲಬುರ್ಗಿ |
| ವಾಸಸ್ಥಳ | : | ಕಲಬುರ್ಗಿ |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 30-01-2024

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ

ನಾನು 2018 ಮತ್ತು 2019 ನೇ ಸಾಲಿನಲ್ಲಿ ರಾಯಚೂರಿನ ಜಿಲ್ಲಾ ಪೋಲಿಸ ಅಧೀಕ್ಷಕರ ಕಚೇರಿಯಲ್ಲಿ ಬೆರಳು ಮುದ್ರೆ ವಿಭಾಗದಲ್ಲಿ ಬೆರಳು ಮುದ್ರೆ ತಜ್ಞನಾಗಿ ಕೆಲಸ ನಿರ್ವಹಿಸಿದ್ದೇನೆ.

ದಿಃ 12-12-2018 ರಂದು ಪೋಲಿಸ ಅಧೀಕ್ಷಕರು ಬೆರಳು ಮುದ್ರೆ ಸಂಗ್ರಹಾಲಯ , ಬೆಂಗಳೂರು ರವರು ಒಂದು ಮೆಮೊ ನೀಡಿ ಅದರೊಂದಿಗೆ ಒಂದು ದಸ್ತಾವೆಜನ್ನು ನೀಡಿ ಅವುಗಳಲ್ಲಿರುವ ವಿವಾದಿತ ಮತ್ತು ಅಂಗೀಕೃತ ಬೆರಳು ಮುದ್ರೆಗಳನ್ನು ಪರಿಶೀಲಿಸಿ, ಹೋಲಿಕೆ ಮಾಡಿ ಅಭಿಪ್ರಾಯ ನೀಡುವಂತೆ ಹೇಳಿದ್ದರು. ಅದರಂತೆ ನಾನು ನಿಪಿ-7, ನಿಪಿ-8 ಕ್ಕೆ ಲಗತ್ತಿಸಿದ ಛಾಪಾ ಕಾಗದ , ನಿಪಿ-9 ಅದರೊಂದಿಗೆ ಇರುವ ಇನ್ನೊಂದು ಛಾಪಾ ಕಾಗದ, ನಿಪಿ-10 ಮತ್ತು 11 ನ್ನು ಪರಿಶೀಲಿಸಿ ಅವುಗಳನ್ನು ಅಂಗೀಕೃತ ಬೆರಳುಮುದ್ರೆ ಯೊಂದಿಗೆ ಹೋಲಿಕೆ ಮಾಡಿ ಪರಿಶೀಲಿಸಿದೆ. ನಿಪಿ-7 ರಿಂದ 11 ರಲ್ಲಿರುವ ವಿವಾದಿತ ಎಡಗೈ ಹೆಬ್ಬೆರಳಿನ ಮುದ್ರೆಗಳು 1 ನೇ ಆರೋಪಿಯ ಎಡಗೈ ಹೆಬ್ಬೆರಳಿನ ಮಾದರಿ ಬೆರಳು ಮುದ್ರೆಗೆ ಹೋಲಿಕೆಯಾಗಿರುತ್ತವೆ. ಈ ಬಗ್ಗೆ ನಾನು ನನ್ನ ಅಭೀಪ್ರಾಯವನ್ನು ಅಭಿಪ್ರಾಯವನ್ನು ಮತ್ತು ಅದಕ್ಕೆ ಆಧಾರಗಳ ಸಮೇತ ನೀಡಿರುತ್ತೇನೆ.

ಪೋಲಿಸ ಅಧೀಕ್ಷಕರು ಬೆರಳು ಮುದ್ರೆ ಸಂಗ್ರಹಾಲಯ , ಬೆಂಗಳೂರು ರವರು ನೀಡಿದ ಜ್ಞಾಪನಾ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ14 ಎಂದು ಗುರುತಿಸಲಾಯಿತು.

ಬೆರಳು ಮುದ್ರೆ ಪರೀಕ್ಷಾ ಪ್ರಮಾಣ ಪತ್ರ ಮತ್ತು ಅಭಿಪ್ರಾಯಕ್ಕೆ ಆಧಾರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 15 ಮತ್ತು 16 ಎಂದು ಮತ್ತು ಅವುಗಳಲ್ಲಿಯ ಸಾಕ್ಷಿ ಸಹಿಗಳನ್ನು ನಿಪಿ 15 ಎ , 16 ಎ ಎಂದು ಗುರುತಿಸಲಾಯಿತು. ನಿಪಿ 16 ರೊಂದಿಗೆ ಬೆರಳು ಮುದ್ರೆ ವಿಕಸಿತ 19 ಭಾವ ಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ 16 ಬಿ ರಿಂದ 16 ಟಿ. ಎಂದು ಗುರುತಿಸಲಾಯಿತು.

1 ನೇ ಆರೋಪಿಯ ಬೆರಳು ಮಾದರಿ ಬೆರಳು ಮುದ್ರೆಗಳ ಪಟ್ಟಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಶಾನೆ 17 ಮತ್ತು 18 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ಬೆರಳು ಮುದ್ರೆಗಳನ್ನು ಪರಿಕ್ಷೀಸಲು ಡಾಃ ಹೆನ್ರಿಕರವರ ನಿಯಮಗಳನ್ನು ಅನುಸರಿಸಿ ಪರಿಶೀಲಿಸುತ್ತೇವೆ. ಅದರಲ್ಲಿ 4 ವಿನ್ಯಾಸಗಳು ಇವೆ. ನನು ಬೆರಳು ಮುದ್ರೆ ತಜ್ಞ ಎಂದು ನನ್ನ ವರದಿಯೊಂದಿಗೆ ಪ್ರಮಾಣ ಪತ್ರ ಸಲ್ಲಿಸಿಲ್ಲ. ನನಗೆ ಸಿಂಧನೂರು ಪೋಲಿಸರಿಂದ ನೇರವಾಗಿ ಅಭಿಪ್ರಾಯ ಕೋರಿ ಪತ್ರ ವ್ಯವಹಾರ ಆಗಿಲ್ಲ ಬೆಂಗಳೂರು ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಸಾಕಷ್ಟು ಬೆರಳು ಮುದ್ರೆ ತಜ್ಞರು ಇದ್ದಾರೆ ಎಂದರೆ ಸರಿ. ಈ ಪ್ರಕರಣ ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿ ಆಗಿರುವದರಿಂದ ಪೋಲಿಸರಿಗೆ ಅನುಕೂಲ ಆಗಲು ಎಂದು ಹೇಳಿ ನಮಗೆ ಬೆರಳು ಮುದ್ರೆ ಅಭಿಪ್ರಾಯ ಕೋರಿದ್ದಾರೆ ಎಂದರೆ ಸರಿಯಲ್ಲ. ಮಾದರಿ ಬೆರಲು ಮುದ್ರೆಗಳ ಪಟ್ಟಿ ನಿಪಿ 17 ಮತ್ಉ 18 ರಲ್ಲಿ 1 ನೇ ಆರೋಪಿಯ ಹೆಸರುನ್ನು ಬರೆದು ಕಳುಹಿಸಿದ್ದಾರೆ ಎಂದರೆ ಸರಿ. ಆ ರೀತಿ ಹೆಸರು ನಮೂದಿಸಿದ ಕಾರಣ ನಾನು ಯಾವದೇ ಪರಿಕ್ಷೇ ಮಾಡದೇ ವಿವಾದಿತ ಬೆರಳು ಮುದ್ರೆಗಳು 1 ನೇ ಆರೋಪಿಯ ಬೆರಳು ಮುದ್ರೆಗೆ ಹೋಲಿಕೆ ಆಗಿರುತ್ತವೆ ಎಂದು ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ವಿವಾದಿತ ಬೆರಳು ಮುದ್ರೆಗಳು 1 ನೇ ಆರೋಪಿಯ ಬೆರಳು ಮುದ್ರೆಗಳು ಎಂದು ಪೋಲಿಸರ ಹೇಳಿದ ಮೇರೆಗೆ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ವಿವಾದಿತ ಬೆರಳು ಮುದ್ರೆಗಳ ದಾಖಲೆಗಳು ಪೋಲಿಸರಿಂದ ನಮಗೆ ಬಂದಿವೆ ಎಂದರೆ ಸರಿಯಲ್ಲ. ನಮ್ಮ ಮುಖ್ಯ ಕಛೇರಿಯಿಂದ ಬಂದಿವೆ. ಉದ್ದೇಶ ಪೂರ್ವಕವಾಗಿಯೇ ನಿಪಿ 7 ರಿಂದ 11 ರಲ್ಲಿರುವ ಎಲ್ಲಾ ಬೆರಳು ಮುದ್ರೆಗಳ ಬಗ್ಗೆ ಅಭಿಪ್ರಾಯ ಕೇಳಿಲ್ಲ ಎಂದರೆ ಸರಿಯಲ್ಲ. ನಾನು ನೀಡಿದ ವರದಿಯು ಪರಿಪೂರ್ಣ ವರದಿ ಅಲ್ಲ ಎಂದರೆ ಸರಿಯಲ್ಲ. ಮಾದರಿ ಬೆರಳು ಮುದ್ರೆಗಳನ್ನು ಹೊರತು ಪಡಿಸಿ ನಿಪಿ 7 ರಿಂದ 11 ರಲ್ಲಿರುವ ಬೇರೆ ಬರಳು ಮುದ್ರೆಗಳನ್ನು ನಾನು ಪರಿಶೀಲಿಸಿಲ್ಲ.

ನಾನು ಇಲ್ಲಿಯವರೆಗೆ ಸುಮಾರು 65 ಪ್ರಕರಣಗಳಲ್ಲಿ ನನ್ನ ಅಭಿಪ್ರಾಯ ನೀಡಿದ್ದೇನೆ. ಮಾದರಿ ಬೆರಳು ಮುದ್ರೆ ಸಂಗ್ರಹಾಲಯ ಪಂಚನಾಮೆಯನ್ನು ನನಗೆ ಕಳುಹಿಸಿಕೊಟ್ಟಿರಲಿಲ್ಲ.

ನಿಪಿ7 ರಿಂದ 11ರ ದಾಖಲೆಗಳು ಸುಮಾರು 20 ವರ್ಷದ ಹಳೆಯ ದಾಖಲೆಗಳು ಎಂದರೆ ಸರಿ. ಮನುಷ್ಯರ ವಯಸ್ಸಾದಂತೆಲ್ಲಾ ಬೆರಳು ಮುದ್ರೆಗಳು ಬದಲಾವಣೆಯಾಗುತ್ತವೆ ಎಂದರೆ ಸರಿಯಲ್ಲ. ನಾನ ಸರಿಯಾದ ಪರಿಶೀಲನೆ ಮಾಡದೇ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ವಿವಾದಿತ ಬೆರಳು ಮುದ್ರೆಗಳು ಮತ್ತು ಮಅದರಿ ಬೆರಳು ಮುದ್ರೆಗಳು 1 ನೇ ಆರೋಪಿಯ ಬೆರಳು ಮುದ್ರೆಗಳು ಅಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.